(ಇಂದು ದಿನಾಂಕಃ 26-06-2023 ರಂದು ಸಾಕ್ಷಿದಾರರನ್ನು ಪುನಃ ಕರೆಯಿಸಿ ಪ್ರಮಾಣವಚನ ಬೋಧಿಸಿ ಮುಖ್ಯ ವಿಚಾರಣೆಗೆ ಒಳಪಡಿಸಲಾಯಿತು ಬೋಧಿಸಲಾಯಿತು.)

**ಮುಂದುವರಿದ ಪಾಟೀ ಸವಾಲುಃ ವಾದಿ ಪರಃ ಶ್ರೀ ಎಸ್.ಕೆ.ಪಿ. ವಕೀಲರಿಂದಃ**

ನಾನು ಕೆಲವು ದಾಖಲೆಗಳನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ. ಅದು ಜಾಗ ಬಿನ್‌ಶೇತ್ಕಿಯಾಗಿರುವ ದಾಖಲೆಗಳು. ನಾನು ಹಾಜರುಪಡಿಸಿದ ಆಕಾರ ಬಂದ್‌ನಲ್ಲಿ ಒಟ್ಟೂ ಕ್ಷೇತ್ರ 2-32-00 ಗುಂಟೆ ಇದ್ದು, ಅದರಲ್ಲಿ 3 ಗುಂಟೆ ಖರಾಬ ಇದೆ ಎಂದರೆ ಸರಿ. ಸದರಿ ದಾಖಲೆಯನ್ನು ನಿ.ಸಿ. 9 ಎಂದು ಗುರುತಿಸಲಾಯಿತು. ಮನೆಯ ಬಗ್ಗೆ ಖರಾಬ ಎಂದು ತೋರಿಸಿದ್ದು, ಆದರೆ ಮಾರ್ಕ ತೋರಿಸಿರುವುದಿಲ್ಲ. ಸದರಿ 2 ಎಕರೆ 32 ಗುಂಟೆಯಲ್ಲಿ ಮನೆ ಇರುವ ಬಗ್ಗೆ ಯಾವುದೇ ದಾಖಲೆ ಇಲ್ಲ. RTC ಪ್ರಕಾರ ಸದರಿ 3 ಗುಂಟೆ ಖರಾಬ ಜಾಗ ದಾರಿಗೆ ಇದೆ ಎಂದರೆ ಸರಿಯಲ್ಲ. CTS ಮತ್ತು ADLR ಎರಡೂ ನಮ್ಮ ಇಲಾಖೆಗೆ ಬರುತ್ತದೆ ಎಂದರೆ ಸರಿ. ಶೇತ್ಕಿ ಮತ್ತು ಬಿನ್‌ಶೇತ್ಕಿ ಎರಡೂ ದಾಖಲೆಗಳು ನಮ್ಮ ಇಲಾಖೆಯಲ್ಲಿ ಲಭ್ಯ ಇದೆ ಎಂದರೆ ಸರಿ. RTC ದಾಖಲೆ ತಹಶೀಲ್ದಾರ ಕಚೇರಿಯಲ್ಲಿ ಇದ್ದು, ಅದಕ್ಕೆ ಸಂಬಂಧಪಟ್ಟ ಸರ್ವೆ ದಾಖಲೆಗಳು ನಮ್ಮ ಬಳಿ ಇರುತ್ತವೆ. ಕಮೀಶನ್ ವರದಿಯಲ್ಲಿ ಯಾವ ಜಾಗದಲ್ಲಿ ಯಾರು ಇದ್ದಾರೆ ಹಾಗೂ ಯಾರು ಮಾಲಿಕರು ಎಂದು ನಮೂದು ಮಾಡಿಲ್ಲ ಎಂದರೆ ಸರಿಯಲ್ಲ. ರೆಕಾರ್ಡ ಪ್ರಕಾರ ವಾದಿಗೆ 6 ಗುಂಟೆ ಜಾಗ ಇದೆ. ಯಾರು ಯಾರು ಎಷ್ಟು ಜಾಗದಲ್ಲಿ ಇದ್ದಾರೆ ಎಂದು ತಿಳಿಸಲು ಮೆಮೊ ಆಪ್ ಇನ್‌ಸ್ಟ್ರಕ್ಷನ್ ಇತ್ತು ಎಂದರೆ ಸರಿ. ವಾದಿ ತೋರಿಸಿರುವ 6 ಗುಂಟೆ ಜಾಗ ಮತ್ತು ಪ್ರತಿವಾದಿ ತೋರಿಸಿರುವ ಅವರ ಜಾಗ ಒಂದೇ ಇದೆ. ಪ್ರತಿವಾದಿ ಇರುವ ಜಾಗ ಮತ್ತು ಉಳಿದ ಜಾಗವನ್ನು ಗುರುತು ಹಾಕಿ ತೋರಿಸಿರುತ್ತೇನೆ. ವರದಿಯಲ್ಲಿ ಪೂರ್ತಿ ವಿಸ್ತೀರ್ಣ ನಮೂದಿಸಿದ್ದು, 1 ರಿಂದ 13 ನೇ ಪ್ರತಿವಾದಿಯರ ಪ್ರತ್ಯೇಕ ಪ್ರತ್ಯೇಕ ಜಾಗವನ್ನು ತೋರಿಸಿಲ್ಲ. ಶೇತ್ಕಿ ಮತ್ತು ಬಿನ್‌ಶೇತ್ಕಿ ಎಂದು

ಜಾಗ ವಿಂಗಡಣೆಯಾಗಿದೆ. 2 ಎಕರೆ 32 ಗುಂಟೆ ಪೈಕಿ 38 ಗುಂಟೆ ಬಿನಶೇತ್ಕಿಯಾಗಿದ್ದು, ಅದರ ಬಗ್ಗೆ ದಾಖಲೆ ಇದ್ದು, 1 ಎಕರೆ 34 ಗುಂಟೆ ಶೇತ್ಕಿ ಜಮೀನಾಗಿದ್ದು, ಅದರಲ್ಲಿ 3 ಗುಂಟೆ ಖರಾಬು ಇದೆ.

ದಿನಾಂಕ 23-08-2022 ರ ಪತ್ರ ಮತ್ತು ದಾಖಲೆಯನ್ನು ನಾನು ಪ್ರತಿವಾದಿ ಕಡೆಯಿಂದ ಪಡೆದಿರುತ್ತೇನೆ. ಅದರಲ್ಲಿರುವ ನಕ್ಷೆ ಮತ್ತು ನಾನು ತಯಾರಿಸಿರುವ ನಕ್ಷೆ ಒಂದೇ ರೀತಿ ಇದೆ ಎಂದರೆ ಸರಿಯಲ್ಲ. ನಾನು ಈ ಹಿಂದೆ ಕೋರ್ಟ ಕಮೀಶನರ್ ಸಲ್ಲಿಸಿದ ನಿ.ಸಿ. 1 ರಿಂದ ನಿ.ಸಿ.7 ನ್ನು ನೋಡಿರುವುದಿಲ್ಲ. ಈ ಪ್ರಕರಣದಲ್ಲಿ ಪಕ್ಷಗಾರರಿಗೆ ಏನು ವಿವಾದ ಇದೆ ಎಂದು ಮಾಹಿತಿ ಪಡೆದಿದ್ದೇನೆ. ಈ ಪ್ರಕರಣದ ದಾಖಲೆಗಳನ್ನು ಪರಿಶೀಲಿಸಿರುವುದಿಲ್ಲ ಎಂದರೆ ಸರಿಯಲ್ಲ. ಹಳೆಯ ಕೋರ್ಟ್ ಕಮೀಶನರ್ ವರದಿ ಯಾಕೆ ತಿರಸ್ಕೃತವಾಗಿತ್ತು ಎಂದು ನಾನು ನೋಡಿರುವುದಿಲ್ಲ. ಪ್ರತಿವಾದಿ 1 ರಿಂದ 4 ರವರ ಆಸ್ತಿ ಪ್ರತ್ಯೇಕವಾಗಿ ತೋರಿಸಿಲ್ಲ, ಅದು ಜಂಟಿಯಾಗಿದೆ ಎಂದರೆ ಸರಿ. ಪ್ರತಿವಾದಿ ನಂ. 5 ರಿಂದ 13 ರವರ ಆಸ್ತಿಯನ್ನು ಪ್ರತ್ಯೇಕವಾಗಿ ತೋರಿಸಿಲ್ಲ ಎಂದರೆ ಸರಿ. ಪ್ರತಿವಾದಿ ನಂ. 8, 12 ಮತ್ತು 13 ರವರ ಜಮೀನನ್ನು ಪ್ರತ್ಯೇಕವಾಗಿ ತೋರಿಸಿಲ್ಲ ಎಂದರೆ ಸರಿ. ಸ.ನಂ. 231 ಅ ಹಿಸ್ಸಾ 1 ಅ 1 ಅ ಮಂಗಳಾ ಈರಪ್ಪ ನಾಯ್ಕು ಅಂದರೆ ಪ್ರತಿವಾದಿ ನಂ.11 ರವರ ಜಮೀನನ್ನು ಪ್ರತ್ಯೇಕವಾಗಿ ತೋರಿಸಿಲ್ಲ ಎಂದರೆ ಸರಿ. ರೆಕಾರ್ಡ ಪ್ರಕಾರ ಪ್ರತ್ಯೇಕ ವಿಸ್ತೀರ್ಣ ತೋರಿಸಿದ್ದರೆ ಯಾರಿಗೆ ಎಷ್ಟು ಕ್ಷೇತ್ರ ಇದೆ ಎಂದು ಗೊತ್ತಾಗುತ್ತಿತ್ತು ಎಂಬ ಪ್ರಶ್ನೆಗೆ ಸಾಕ್ಷಿ memo of instruction ನಲ್ಲಿ ಕೇಳಿರುವುದಿಲ್ಲ ಎಂದು ಎನ್ನುತ್ತಾರೆ. Memo of Instruction ನಲ್ಲಿ 8 ನೇ ನಂಬರದಲ್ಲಿ RTC ಪ್ರಕಾರ ಪ್ರತ್ಯೇಕ ವಿಸ್ತೀರ್ಣ ತೋರಿಸಲು ಸೂಚಿಸಲಾಗಿತ್ತು ಎಂದರೆ ಸರಿಯಲ್ಲ. ಅಳತೆ ಮಾಡಲು ಹೋಗುವಾಗ ಖರಾಬ ಕಂಡುಬಂದಿದ್ದರೂ ಸಹ ಅದನ್ನು ತೋರಿಸಿಲ್ಲ ಎಂದರೆ ಸರಿಯಲ್ಲ. ಓಡಾಡುವ ದಾರಿ, ನೀರು ಹೋಗುವ ದಾರಿ ದಾಖಲೆ ಪ್ರಕಾರ ಇದ್ದರೆ ಮಾತ್ರ ಖರಾಬ ಆಗುತ್ತದೆ. Form No. 4 ಮತ್ತು Form No. 11 ನಮ್ಮ ಬಳಿ ಇದೆ. Form No. 4 ರಲ್ಲಿ ಯಾರು ಮಾಲಿಕರು ಸರ್ವೆ ಮಾಡುವಾಗ ಹಾಜರಿದ್ದರು ಅವರ ಸಹಿ ಇರುತ್ತದೆ. Form

No. 11 ನಲ್ಲಿ ವಿಸ್ತೀರ್ಣ ಇರುತ್ತದೆ ಹಾಗೂ Form No. 4 ರಲ್ಲಿ ಹೆಸರು ಮತ್ತು ವಿಸ್ತೀರ್ಣ ಇರುತ್ತದೆ. Form No. 4 ಮತ್ತು Form 11 ನ್ನು ಹಾಜರು ಮಾಡಿಲ್ಲ ಎಂಬ ಪ್ರಶ್ನೆಗೆ ಸಾಕ್ಷಿ ಇರುವಷ್ಟು ದಾಖಲೆಗಳನ್ನು ಹಾಜರುಪಡಿಸಿದ್ದೇನೆ ಎನ್ನುವರು. ಸಾಕ್ಷಿ ಮುಂದುವರಿದು ಬಿನಶೇತ್ಕಿಯಾಗದ ಜಾಗಕ್ಕೆ Form No. 4 ಮತ್ತು Form No. 11 ಮಾಡುವುದಿಲ್ಲ ಎನ್ನುವರು. ಕೆಜೆಪಿಯಾಗಿರುವ ಎಲ್ಲಾ ದಾಖಲೆಗಳನ್ನು ಹಾಜರು ಮಾಡಿದ್ದೇನೆ. ಶೇತ್ಕಿ ಜಮೀನಿನ ದಾಖಲೆಗಳನ್ನು ಹಾಜರು ಮಾಡಿಲ್ಲ. ಶೇತ್ಕಿ ಮತ್ತು ಬಿನ್‌ಶೇತ್ಕಿ ಎಂದು ಜಾಗ ವಿಭಾಗ ಆಗಿಲ್ಲ ಎಂದರೆ ಸರಿಯಲ್ಲ. ವಿಭಾಗ ಆಗಿದ್ದಲ್ಲಿ ಯಾರು ಯಾರಿಗೆ ಎಷ್ಟು ಗುಂಟೆ ಎಂದು ಬರುತ್ತಿತ್ತು ಎಂದರೆ ಸರಿಯಲ್ಲ. ಪ್ರತಿವಾದಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಶೇತ್ಕಿ ಮತ್ತು ಬಿನಶೇತ್ಕಿ ವಿಂಗಡೆಯಾಗಿರುವುದಿಲ್ಲ ಆಕಾರಣ ದಾಖಲೆ ಇರುವುದಿಲ್ಲ ಎಂದರೆ ಸರಿಯಲ್ಲ. ಬಿನಶೇತ್ಕಿಯಾಗಿರುವ ಮತ್ತು ಶೇತ್ಕಿ ಜಮೀನು ಎರಡನ್ನೂ ನಕ್ಷೆಯಲ್ಲಿ ತೋರಿಸಿರುತ್ತೇನೆ. 1 ಎಕರೆ 9 ಗುಂಟೆ 14 ಆಣೆ ಪ್ರತಿವಾದಿಯರ ಬಳಿ ಇದೆ. ಪ್ರತಿವಾದಿಗೆ ಭೂನ್ಯಾಯಮಂಡಳಿ ಪ್ರಕಾರ 1 ಎಕರೆ 11 ಗುಂಟೆ ಮಂಜೂರಿಯಾಗಿದ್ದು, ಅದಕ್ಕಿಂತ ಜಾಸ್ತಿ ತೋರಿಸಿದ್ದೇನೆ ಎಂದರೆ ಸರಿಯಲ್ಲ. ಸದರಿ 1 ಎಕರೆ 11 ಗುಂಟೆಯಲ್ಲಿ ರಸ್ತೆ ಇದೆ ಎಂದರೆ ಸರಿ. ಅದನ್ನು ಮುನ್ಸಿಪಾಲ್ಟಿಗೆ ಬಿಟ್ಟುಕೊಟ್ಟ ಬಗ್ಗೆ ನನಗೆ ಗೊತ್ತಿಲ್ಲ. ನಾನು ಪ್ರತಿವಾದಿ ಹೇಳಿದ ಪ್ರಕಾರ ನಕ್ಷೆ ತಯಾರಿಸಿ ಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ದಾಖಲೆ ಪ್ರಕಾರ ನಕ್ಷೆಯಲ್ಲಿ ತೋರಿಸಿದ್ದರೆ ಯಾರ ಬಳಿ ಎಷ್ಟು ಆಸ್ತಿ ಇದೆ ಎಂದು ಗೊತ್ತಾಗುತ್ತಿತ್ತು ಎಂದರೆ ಸರಿಯಲ್ಲ. ಪ್ರತಿವಾದಿಯರಿಗೆ ಸಹಾಯ ಮಾಡುವ ಉದ್ದೇಶದಿಂದ ಎಲ್ಲಾ ದಾಖಲೆಗಳನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ.

ನಾವು ಕೆಜೆಪಿ ಮಾತ್ರ ಉಳಿಸಿಕೊಂಡು ಅದಕ್ಕೆ ಸಂಬಂಧಪಟ್ಟ ಉಳಿದ ದಾಖಲೆಗಳನ್ನು ಕಂದಾಯ ಇಲಾಖೆಗೆ ವಾಪಸ್ಸು ಕಳುಹಿಸುತ್ತೇವೆ. ಅದರ ಪ್ರತಿ ನಮ್ಮ ಕಚೇರಿಯ ಕಡತದಲ್ಲಿ ಇರಬಹುದು. ಪ್ರತಿವಾದಿಯರಿಗೆ ಸಹಾಯ ಮಾಡುವ ಉದ್ದೇಶದಿಂದ ಎನ್.ಎ. ಪ್ರಕಾರ ನಕ್ಷೆಯನ್ನು ತಯಾರಿಸದೇ

ಪ್ರತಿವಾದಿ ಹೇಳಿಕೆ ಪ್ರಕಾರ ಸುಳ್ಳು ನಕ್ಷೆ ತಯಾರಿಸಿದ್ದೇನೆ ಎಂದರೆ ಸರಿಯಲ್ಲ. ವಾದಿ ಮತ್ತು ಪ್ರತಿವಾದಿಯರ ಜಮೀನು RTC ಪ್ರಕಾರ ಒಂದೇ ಕಡೆ ಇದೆ. ವಾದಿಯ ಜಮೀನು ಪ್ರತಿವಾದಿಯ ಬಳಿ ಇದ್ದು, ಪ್ರತಿವಾದಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಎನ್.ಎ. ಆದೇಶದ ಪ್ರಕಾರ ಅಳತೆ ಮಾಡಿ ವರದಿ ಸಲ್ಲಿಸಿದ್ದಲ್ಲಿ ನಿಜವಾದ ವರದಿ ಬರುತ್ತಿತ್ತು ಎಂದರೆ ಸರಿಯಲ್ಲ. ವಾದಿ – ಪ್ರತಿವಾದಿಯರ ಎಲ್ಲಾ ಕ್ಷೇತ್ರವನ್ನು ತೋರಿಸದೇ ಸುಳ್ಳು ವರದಿ ಕೊಟ್ಟಿದ್ದೇನೆ ಎಂದರೆ ಸರಿಯಲ್ಲ.

**<u>ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಎಸ್.ವಾಯ್.ಎಸ್. ವಕೀಲರಿಂದಃ</u>**

ಸಾಮಾನ್ಯವಾಗಿ ಕ್ರಯ ದಸ್ತಾವೇಜನಲ್ಲಿ ಬರೆದ ಗಡಿಯ ಒಳಗಡೆ ಇರುವ ಜಮೀನು ಖರೀದಿದಾರರ ಕಬಜೆಯಲ್ಲಿ ಇರುತ್ತದೆ ಎಂದರೆ ಸರಿ. ವಾದಿಯ ಕ್ರಯ ದಸ್ತಾವೇಜು ನೋಡಿದ್ದೇನೆ. ವಾದಿಯ ಕ್ರಯದಸ್ತವೇಜಿನಲ್ಲಿ ಪೂರ್ವಕ್ಕೆ ಮತ್ತು ದಕ್ಷಿಣಕ್ಕೆ ಸರ್ವೆ ಹದ್ದು, ಪಶ್ಚಿಮಕ್ಕೆಃ ಇದೇ ನಂಬರಿನ ಇದೇ ಹಿಸ್ಸಾ ಪೈಕಿ ಖರೀದಿದಾರ ಶೇಷು ಹವಾಲ್ದಾರ ವಗೈರೆ ಭೂಮಿ ಹದ್ದು ಮತ್ತು ಉತ್ತರಕ್ಕೆಃ ಇದೇ ನಂಬರದ ಇದೇ ಹಿಸ್ಸಾದ ಪೈಕಿ ನಾನು ಇಟ್ಟುಕೊಂಡ ಭೂಮಿಯ ಒಳಗಡೆ ಪೂರ್ವದಿಂದ ಪಶ್ಚಿಮಕ್ಕೆ ಬರ ಹೋಗುವ ನಾನು ಇಟ್ಟ 5 ಅಡಿ ಅಗಲದ ದಾರಿ ಹದ್ದು ಎಂದು ಬರೆಯಲಾಗಿದೆ ಎಂದರೆ ಇರಬಹುದು. ಆಕಾರಣ ವಾದಿಯ ಜಮೀನು ಪೂರ್ವ–ಪಶ್ಚಿಮವಾಗಿ ಹಾದು ಹೋಗಿರುವ 5 ಅಡಿ ಅಗಲದ ಕಾಲುದಾರಿಯ ದಕ್ಷಿಣಕ್ಕೆ ಇದೆ ಎಂದರೆ ಸರಿ. 5 ಅಡಿ ಅಗಲದ ಕಾಲುದಾರಿಯನ್ನು ನಕ್ಷೆಯಲ್ಲಿ ತೋರಿಸಿದ್ದೇನೆ. 5 ಅಡಿ ಅಗಲದ ಕಾಲುದಾರಿಯ ಉತ್ತರಕ್ಕೆ ವಾದಿಯ ಯಾವುದೇ ಜಮೀನು ಬರುವುದಿಲ್ಲ ಎಂದು ನನಗೆ ಹೇಳಲು ಬರುವುದಿಲ್ಲ. ಆ ಕಾರಣ ವಾದಿ 5 ಅಡಿ ಅಗಲದ ಕಾಲುದಾರಿಯ ಉತ್ತರಕ್ಕೆ ಕೇಳುವ ಜಮೀನು ನಿರಾಧಾರ ಎಂದು ನನಗೆ ಹೇಳಲು ಬರುವುದಿಲ್ಲ. ದಾಖಲೆಗಳನ್ನು ಸರಿಯಾಗಿ ಅರ್ಥ ಮಾಡಿಕೊಂಡರೆ ಈ ಪ್ರಶ್ನೆಗೆ ನಿಖರವಾಗಿ ಉತ್ತರಕೊಡಬಹುದು ಎಂದರೆ ಸರಿಯಲ್ಲ.

**ಮರು ವಿಚಾರಣೆ – ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸರಿ ಇದೆ.

ಪ್ರಧಾನ ಹಿರಿಯ ಸಿವಿಲ್ ಜಡ್ಜ್ ಕಾರವಾರ